ಹಣವನ್ನು ಅಲ್ಲಿಯೇ ಖರ್ಚು ಮಾಡಿದರೆ ಆ ಕಾಲೇಜಿನ ಪ್ರಯೋಗ ಶಾಲೆಗೆ ಅನುಕೂಲವಾಗುತ್ತದೆ. ಅದನ್ನು ತೆಗೆದುಕೊಂಡು ಇಡೀ ರಾಜ್ಯಕ್ಕೆ ಹಂಚಿದರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಯ ಹಣವನ್ನು ಅಲ್ಲಿಯೇ ಖರ್ಚು ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಬಿ. ಸೋಮಶೇಖರ್.—ಆ ಬೇಡಿಕೆ ಬಹಳ ದಿನಗಳಿಂದ ಇದೆ. ತತ್ವತಃ ಅದನ್ನು ನಾನು ಒಪ್ಪುತ್ತೇವೆ. ಅದಕ್ಕೆ ಆಡಳಿತಾತ್ಮಕವಾಗಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕು. ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಆ ರೀತಿ ಮಾಡಬೇಕೆಂದು ಸರ್ಕಾರಕ್ಕೆ ಕಾಳಜಿ ಇದೆ.

ಶ್ರೀ ಬಿ. ಧರ್ಮಪ್ಪ.—ಈ ತರಹ ಮಾಡುತ್ತೇವೆಂದು ಈಗಲಾದರೂ ಭರವಸೆ ಕೊಡುತ್ತೀರಾ?

ಶ್ರೀ ಬಿ. ಸೋಮಶೇಖರ್.—ಆ ರೀತಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪತ್ರಿಕೆಗಳು

ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು

೭೯೫ ಶ್ರೀ ಪಂಪಾವತಿ (ದಾವಣಗೆರೆ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಬಾರಿ ರಾಜ್ಯದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಹೆಚ್ಚಿಸಿರುವ ಎಸ್. ಎಸ್. ಎಲ್. ಸಿ. ಪರೀಕ್ಷಾ ಶುಲ್ಕಗಳಿಂದ ರಾಜ್ಯಕ್ಕೆ ಬರುವ ಒಟ್ಟು ಆದಾಯವೆಷ್ಟು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ೪,೭೭,೫೭೯

ಆ) ರೂ. ೧,೨೯,೧೯,೦೭೨-೪೭ ಪೈಸೆ

ಕಾರಂಜ ಯೋಜನೆಗೆ ಹಣ ಬಿಡುಗಡೆ ಮಾಡುವ ಬಗೆ

೧೦೫೧. ಶ್ರೀ ಬಸವರಾಜ್ ಪಾಟೀಲ್ ಅನ್ವರಿ(ಔಟ್ಪೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾರಂಜ ಯೋಜನೆಯು ಎಂದಿನಿಂದ ಪ್ರಾರಂಭವಾಗಿದೆ ಹಾಗೂ ಅದರ ಅಂದಾಜು ವೆಚ್ಚ ಎಷ್ಟು ?

ಆ) ಈ ಬಗ್ಗೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಇ) ಈ ಯೋಜನೆಗೆ ಅಧಿಕ ಹಣ ಒದಗಿಸಿ ತೀವ್ರಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೈಕೊಂಡ ಕ್ರಮವೇನು ?

ಈ) ಈ ಯೋಜನೆಯಿಂದ ನಿರಾಶ್ರಿತರಾದವರಿಗೆ ಮನೆಕಟ್ಟಿಕೊಳ್ಳಲು ಹಾಡ್ಕೋ ಯೋಜನೆಯಲ್ಲಿ ಸಾಲ ಮಂಜೂರ್ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೨ನೇ ಸಾಲಿನಲ್ಲಿ ಪ್ರಾರಂಭವಾಗಿದೆ. ಮೂಲ ಅಂದಾಜು ೯.೯೦ ಕೋಟಿ ರೂ.ಗಳು ಮತ್ತು ೧೯೮೫-೮೬ನೇ ದರಪಟ್ಟಿಯ ಮೇಲೆ ತಯಾರಾದ ಪರಿಷ್ಕೃತ ಅಂದಾಜು ೮೯.೭೩ ಕೋಟಿ ರೂಪಾಯಿಗಳು.

ಆ) ೧೯೮೮ನೇ ಫೆಬ್ರುವರಿ ಮಾಹೆ ಅಂತ್ಯದವರೆಗೆ ಒಟ್ಟು ೪೧.೨೩ ಕೋಟಿ ರೂಪಾಯಿಗಳು ವ್ಯಯ ಮಾಡಲಾಗಿದೆ.

ಇ) ಆದ್ಯತೆ ಮೇಲೆ ಹೆಚ್ಚಳ ಅನುದಾನ ನೀಡಲಾಗಿದ್ದು, ಕೆಲಸಗಳನ್ನು ತೀವ್ರಗತಿಯಲ್ಲಿ ಮುಂದುವರೆಸುತ್ತಿದೆ.

ಈ) ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎ ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ವ್ಯವಸಾಯೋತ್ಪನ್ನ ಮಾರುಕಟ್ಟೆಯಿಂದ ವಾಣಿಜ್ಯೇತರ ಬೆಳೆಗಾರರಿಗೆ ಬ್ಯಾಂಕ್ ಸವಲತ್ತು ನಿರಾಕರಣೆ.

೧೨೮೮. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವ್ಯವಸಾಯೋತ್ಪನ್ನ ಮಾರುಕಟ್ಟೆಗಳಲ್ಲಿ ಎಲ್ಲಾ ರೈತರಿಗೂ ಅನುಕೂಲವಾಗಲೆಂದು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಕಟ್ಟಿದ್ದರೂ ವಾಣಿಜ್ಯೇತರ ಬೆಳೆಗಾರರಿಗೆ ಏನೂ ಪ್ರಯೋಜನ ವಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಭತ್ತ ಜೋಳ ಇತರೆ ವಸ್ತುಗಳನ್ನು ಮಾರುಕಟ್ಟೆಗೆ ತಂದರೆ ವ್ಯಾಪಾರಗಾರರು ಒಂದಾಗಿ ಬೇಕೆಂದೇ ಕಡಿಮೆ ಬೆಲೆಗೆ ಕೇಳುತ್ತಾರೆ ಅಂತಹ ಸಂದರ್ಭದಲ್ಲಿ ಧಾನ್ಯವನ್ನು ಅಲ್ಲಿಯೇ ದಾಸ್ತಾನಿಟ್ಟು ಬ್ಯಾಂಕಿನಿಂದ ಸಾಲ ಪಡೆಯಲು ಕೇಳಿದಾಗ ವಾಣಿಜ್ಯ ಬ್ಯಾಂಕಂಗಳು ಸಹಕರಿಸದೇ ರೈತರು ವ್ಯವಸಾಯೋತ್ಪನ್ನ ಮಾರುಕಟ್ಟೆಗೆ ಬಂದು ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ವಾಣಿಜ್ಯ ಬ್ಯಾಂಕುಗಳಿಗೆ ಈ ಬಗ್ಗೆ ಸರ್ಕಾರದಿಂದ ಏನಾದರೂ ಆದೇಶ ಕೊಡಲು ಆಲೋಚಿಸಿದೆಯೆ ?

ಈ) ಈ ಬಗ್ಗೆ ಸಾಕಷ್ಟು ಗೋಡೌನುಗಳನ್ನು ಕಟ್ಟಿಸಿ ಭತ್ತ, ರಾಗಿ, ಜೋಳ ಇತರೆ ದವಸ ಗಳನ್ನು ಬೆಳೆಯುವ ರೈತರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳುವರೆ ?

ಶ್ರೀ ಕೆ ಬಿ ಮಲ್ಲಪ್ಪ (ಮಾರುಕಟ್ಟೆಗಳ ಹಾಗೂ ಒಣ ಭೂ ಅಭಿವೃದ್ಧಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಈಗಾಗಲೇ ರಾಜ್ಯದ ಮಾರುಕಟ್ಟೆ ಪ್ರಾಂಗಣಗಳಲ್ಲಿ ೧.೨೭ ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಸಾಮರ್ಥ್ಯವುಳ್ಳ ೯೧ ಗೋಡೌನ್‌ಗಳನ್ನು ಕಟ್ಟಿಸಿದ್ದು ಅವುಗಳಲ್ಲಿ ರೈತರು ತಮ್ಮ ಹುಟ್ಟುವಳಿಯನ್ನು ಸಂಗ್ರಹಿಸಿಡಲು ಅವಶ್ಯಕ ಸೌಲಭ್ಯವನ್ನು ಒದಗಿಸುವಂತೆ ಮಾರುಕಟ್ಟೆ ಸಮಿತಿಗಳಿಗೆ ಸೂಕ್ತ ನಿರ್ದೇಶನ ಗಳನ್ನು ನೀಡಲಾಗಿದೆ.